ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಟ್ಟಡಗಳು,ನೃಪತುಂಗ ರಸ್ತೆ,ಬೆಂಗಳೂರು

ಸಂಖ್ಯೆ: ದೈಶಿ: ಸಂ.ಸಿ.ಕಾ.ಸಿ.ಆರ್ 26/2017-18 ದಿನಾಂಕ: 09-08-2017

# ಸುತ್ತೋಲೆ

ವಿಷಯ: ಭಾರತ ಸ್ವಾತಂತ್ರ್ಯ ಗಳಿಸಿ 70 ವರ್ಷ ಪೂರೈಸಿದ ಸಂದರ್ಭದಲ್ಲಿ "ಸಂಕಲ್ಪದಿಂದ ಸಿದ್ದಿ" ಕಾರ್ಯಕ್ರಮವನ್ನು ರಾಜ್ಯಾದ ಎಲ್ಲಾ ಶಾಲೆಗಳಲ್ಲಿ ಹಮ್ಮಿಕೊಳ್ಳುವ ಬಗ್ಗೆ.

ಉಲ್ಲೇಖ: ಮಾನ್ಯ ಜಂಟಿ ಕಾರ್ಯದರ್ಶಿಗಳು ಮಾನವ ಸಂಪನ್ಮೂಲ ಅಭಿವೃದ್ದಿ ಇಲಾಖೆ, ಭಾರತ ಸರ್ಕಾರ ಇವರ ಪತ್ರ ಸಂಖ್ಯೆ:ಡಿ.ಓ ನಂ:15-3/2017-ಎಸ್ಸಿ. ಹೆಚ್.ಐ/ಸಿಡಿಎನ್. ದಿನಾಂಕ:07-08-2017

**********

ನಮಗೆಲ್ಲ ತಿಳಿದಿರುವ ಹಾಗೆ ದಿ:15-08-2017 ಕ್ಕೆ ನಮ್ಮ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದು 70 ವರ್ಷ ಸಂದಿರುತ್ತದೆ ಹಾಗೂ ಇದೇ ವರ್ಷ ಆಗಸ್ಟ್ 09 ಕ್ಕೆ "ಭಾರತ ಬಿಟ್ಟು ತೊಲಗಿ" ಚಳುವಳಿ ಆರಂಭಿಸಿ 75 ವರ್ಷವಾಗಿರುತ್ತದೆ. ಈ ಒಂದು ಅವಿಸ್ಮರಣೀಯ ಸಂದರ್ಭವನ್ನು ರಾಷ್ಟ್ರದಾದ್ಯಂತ ಒಂದು ಹಬ್ಬದ ಮಾದರಿಯಲ್ಲಿ ಆಚರಿಸಿ ಸಾರ್ವಜನಿಕರಲ್ಲಿ, ವಿದ್ಯಾರ್ಥಿಗಳಲ್ಲಿ ದೇಶಭಕ್ತಿಯನ್ನು ಮೂಡಿಸಬೇಕಾಗಿರುತ್ತದೆ. ಈ ಆಚರಣೆಯನ್ನು ಚಳುವಳಿಯೋಪಾದಿಯದಲ್ಲಿ ಭಾರತದ ಪ್ರತಿಯೊಬ್ಬ ಪ್ರಜೆಯು ನವಭಾರತದ ದೃಷ್ಟಿಕೋನವಾದ ಸ್ವಚ್ಛ ಭಾರತದ ಅರ್ಥವನ್ನು ಮನಗಾಣುವಂತೆ ಮಾಡುವುದು ಮತ್ತು ದೇಶವನ್ನು ಬಡತನ, ಭ್ರಷ್ಟಾಚಾರ, ಭಯೋತ್ಪಾದನೆ, ಮತಾಂಧತೆ ಮತ್ತು ಜಾತೀಯತೆಗಳಿಂದ ಮುಕ್ತಗೊಳಿಸುವುದರ ಬಗ್ಗೆ ಅರ್ಥೈಸಿಕೊಳ್ಳುವಂತೆ ಮಾಡುವುದು.

ಈ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಲು ಎಲ್ಲಾ ಶಾಲೆಗಳಿಗೆ/ ವಿದ್ಯಾಸಂಸ್ಥೆಗಳಿಗೆ ಈ ಕೆಳಕಂಡಂತೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸೂಚಿಸಲಾಗಿದೆ.

- ಪ್ರತಿ ಶಾಲೆಯೂ 09-08-2017 ರಿಂದ 30-08-2017 ರವರೆಗೆ "ಸಂಕಲ್ಪ" ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು. ಈ ಕಾರ್ಯಕ್ರಮವನ್ನು ಸಾಧ್ಯವಾದಲ್ಲಿ ಯುದ್ಧಸ್ಮಾರಕ, ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದ ಹುತಾತ್ಮರ ಸ್ಮಾರಕದ ಬಳಿ ಅಥವ ಯುದ್ದದಲ್ಲಿ ಹಾಗೂ ಭಯೋತ್ಪಾದನೆ ಹತ್ತಿಕ್ಕುವಲ್ಲಿ ಹುತಾತ್ಮರಾದವರ ನೆನಪಿನಲ್ಲಿ ನಿರ್ಮಿಸಿರುವ ಸ್ಮಾರಕಗಳ ಬಳಿ ಹಮ್ಮಿಕೊಳ್ಳುವುದು. ಅಂತಹ ಸ್ಥಳಗಳು ಲಭ್ಯವಿಲ್ಲದಿದ್ದಲ್ಲಿ ಶಾಲೆಯಲ್ಲಿಯೇ ಹಮ್ಮಿಕೊಳ್ಳುವುದು. ಈ ಸಂದರ್ಭದಲ್ಲಿ ಎಲ್ಲ ಶಿಕ್ಷಕರು, ಶಿಕ್ಷಕಿಯರು ಮತ್ತು ವಿದ್ಯಾರ್ಥಿಗಳಿಂದ ಭಾರತವನ್ನು ಸ್ವಚ್ಛ ಭಾರತವನ್ನಾಗಿ ಮಾಡುವುದಾಗಿ ಮತ್ತು 2022ಕ್ಕೆ ಅಂದರೆ ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ತುಂಬುವುದರೊಳಗೆ ಭಾರತವನ್ನು ಬಡತನ, ಭ್ರಷ್ಟಾಚಾರ, ಭಯೋತ್ಪಾದನೆ, ಮತಾಂಧತೆ ಮತ್ತು ಜಾತೀಯತೆಗಳಿಂದ ಮುಕ್ತಗೊಳಿಸುತ್ತೇವೆ ಎಂದು ಪ್ರಮಾಣ ಮಾಡಿಸುವುದು. ಸ್ಥಳೀಯ/ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ/ ಹುತಾತ್ಮರ ಭಾವಚಿತ್ರವನ್ನು ಶಾಲೆಗಳಲ್ಲಿ ಸಂಸ್ಥಾಪಿಸುವುದು. ಈ ಸಂದರ್ಭದಲ್ಲಿ ಶಿಕ್ಷಕರಾಗಲೀ, ಅತಿಥಿಯಾಗಲೀ ಅಥವಾ ವಿದ್ಯಾರ್ಥಿಗಳಾಗಲೀ ಈ ಪ್ರತಿಜ್ಞಾ ವಿಧಿಯ ಮಹತ್ವದ ಬಗ್ಗೆ ಭಾಷಣ ಮಾಡುವುದು. ಮತ್ತು ಎಲ್ಲರೂ ಸೇರಿ ಭಾರತವನ್ನು ಭಯಾನಕ ಸಮಸ್ಯೆಗಳಿಂದ ಮುಕ್ತಗೊಳಿಸಲು ಶ್ರಮಿಸುವುದರ ಮೂಲಕ ಪ್ರತಿಜ್ಞೆಯನ್ನು ಹೇಗೆ ನೆರವೇರಿಸಬಹುದು ಎಂಬುದರ ಬಗ್ಗೆ ಸಂದೇಶ ನೀಡುವುದು.

- **ರಸಪ್ರಶ್ನೆ ಸ್ಪರ್ಧೆ:** ಸ್ವಾತಂತ್ರ್ಯ ಸಂಗ್ರಾಮ ಮತ್ತು ಭಾರತದ ಅಭಿವೃದ್ದಿ ಬಗ್ಗೆ ರಸಪ್ರಶ್ನೆಗೆ ಸಂಬಂಧಿಸಿದ ಪ್ರಶ್ನೆಗಳನ್ನು mygov ವೆಬ್ಸೈಟ್‌ನಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಪ್ರಶ್ನೆಗಳು ದಿ:09-08-2017 ರಿಂದ 15-08-2017 ರವರೆಗೆ ಲಭ್ಯವಿದ್ದು ಈ ಪ್ರಶ್ನೆಗಳನ್ನು https://quiz.mygov.in ಮೂಲಕ ಪಡೆಯಬಹುದಾಗಿದೆ. ಈ ರಸಪ್ರಶ್ನೆ ಕಾರ್ಯಕ್ರಮದಲ್ಲಿ 09 ಮತ್ತು 10 ನೇ ತರಗತಿ ವಿದ್ಯಾರ್ಥಿಗಳು ಆನ್‌ಲೈನ್ (ಅಂತರ್ಜಾಲದ) ಮೂಲಕ ಭಾಗವಹಿಸಲು ಪ್ರೋತ್ಸಾಹಿಸುವುದು. ಈ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಲು ಮೊದಲು ವಿದ್ಯಾರ್ಥಿಗಳು mygov ವೆಬ್ಸೈಟ್‌ನಲ್ಲಿ ನೋಂದಣಿ ಮಾಡಿಕೊಳ್ಳುವುದು. ಈಗಾಗಲೇ ನೋಂದಣಿ ಮಾಡಿಕೊಂಡಿರುವವರು ಜಿ-ಮೇಲ್ ಮತ್ತು ಫೇಸ್‌ಬುಕ್ ಮೂಲಕ ಲಾಗಿನ್ ಆಗಬಹುದು. ಇದಲ್ಲದೇ ರಸಪ್ರಶ್ನೆ ಪ್ರಶ್ನೆಯ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸಿ ವಿದ್ಯಾರ್ಥಿಗಳಿಗೆ ನೀಡಿ ಸ್ಪರ್ಧೆ ನಡೆಸುವುದು ಮತ್ತು ಇದನ್ನು ಶಾಲೆಯಲ್ಲಿಯೇ ಮೌಲ್ಯಮಾಪನ ಮಾಡಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಗೌರವಿಸುವುದು.

- **ಚಿತ್ರಕಲಾ ಸ್ಪರ್ಧೆ:** 06 ರಿಂದ 10 ನೇ ತರಗತಿ ವಿದ್ಯಾರ್ಥಿಗಳಿಗೆ ದಿನಾಂಕ 09-08-2017 ರಿಂದ 30-08-2017 ಹಮ್ಮಿಕೊಂಡಿರುವ ಸ್ವಾತಂತ್ರ್ಯ ಚಳುವಳಿಯ ವಿಷಯದ ಬಗ್ಗೆ ಚಿತ್ರಕಲಾ ಸ್ಪರ್ದೆ ಏರ್ಪಡಿಸುವುದು. ಉತ್ತಮವಾದ ಚಿತ್ರಕಲೆಗಳನ್ನು ಸೂಚನಾ ಫಲಕಗಳಲ್ಲಿ ಪ್ರಕಟಿಸುವುದು ಮತ್ತು ಶಾಲೆಯ ಮ್ಯಾಗ್ಜೈನ್‌ನಲ್ಲಿ ಪ್ರಕಟಿಸುವುದು ಮತ್ತು ಶಾಲೆಯ ವೆಬ್ಸೈಟ್‌ನಲ್ಲಿ ಅಪ್‌ಲೋಡ್ ಮಾಡುವುದು. ವಿಜೇತ ವಿದ್ಯಾರ್ಥಿಗಳನ್ನು ಗೌರವಿಸುವುದು.

ಈ ರಾಷ್ಟ್ರೀಯ ಚಳುವಳಿಯನ್ನು ಯಶಸ್ವಿಗೊಳಿಸಲು ವ್ಯಾಪಕವಾದ ಪ್ರಚಾರ ಮಾಡಲು ಕ್ರಮವಹಿಸುವುದು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ,ಸಮೂಹ ಮಾಧ್ಯಮಗಳಲ್ಲಿ, ವಿದ್ಯುನ್ಮಾನಗಳಲ್ಲಿ, ಸ್ಥಳೀಯ ಪತ್ರಿಕೆಗಳಲ್ಲಿ, ಶಾಲೆಯ ವೆಬ್ಸೈಟ್‌ನಲ್ಲಿ, ಶಿಕ್ಷಣ ಇಲಾಖೆಯ ವೆಬ್ಸೈಟ್‌ನಲ್ಲಿ ವ್ಯಾಪಕವಾದ ಪ್ರಚಾರ ಮಾಡಿ ಸಾರ್ವಜನಿಕರಲ್ಲಿ ಪ್ರೇರಣೆ ನೀಡುವುದು. ಇದಲ್ಲದೆ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಶಗುನ್ ಪ್ಲಾಟ್ಫಾರಂನಲ್ಲಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ https://www.facebook.Gom/freedom70yearsmhrd/ ಫೇಸ್‌ಬುಕ್ ಪೇಜಿನಲ್ಲಿ ಅಪ್ಲೋಡ್ ಮಾಡುವುದು..

(ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳಿಂದ ಅನುಮೋದಿಸಲ್ಪಟ್ಟಿದೆ)

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಗೆ,

1) ರಾಜ್ಯದ ಎಲ್ಲಾ ಉಪ ನಿರ್ದೇಶಕರು [ಆಡಳಿತ] ಮತ್ತು [ಅಭಿವೃದ್ಧಿ] ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಕ್ರಮಕ್ಕಾಗಿ.
3) ಕಛೇರಿ ಪ್ರತಿ.

ಪ್ರತಿಯನ್ನು,

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬೆಂಗಳೂರು.
2. ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಆರ್.ಎಂ.ಎಸ್.ಎ ಮತ್ತು ಎಸ್.ಎಸ್.ಎ ಬೆಂಗಳೂರು.
4. ಮಾನ್ಯ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ ಮತ್ತು ಕಲಬುರ್ಗಿ.
5. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು.
6. ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ) ಬೆಂಗಳೂರು.
7. ನಿರ್ದೇಶಕರು, ಅಲ್ಪಸಂಖ್ಯಾತ ನಿರ್ದೇಶನಾಲಯ, ಬೆಂಗಳೂರು.
8. ನಿರ್ದೇಶಕರು, ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು.

# ಸಂಕಲ್ಪ ಸಿದ್ಧಿ

(ನವ ಭಾರತ ಚಳುವಳಿ 2017–2022)

## ನವ ಭಾರತ ಪ್ರತಿಜ್ಞೆ

ನವ ಭಾರತಕ್ಕಾಗಿ ನಾವು ಒಟ್ಟಿಗೆ ಪ್ರತಿಜ್ಞೆ ಮಾಡೋಣ.

1942 ರಲ್ಲಿ ಸ್ವಾತಂತ್ರ್ಯ ಯೋಧರು "ಭಾರತ ಬಿಟ್ಟು ತೊಲಗಿ" ಪ್ರತಿಜ್ಞೆಯನ್ನು ಸ್ವೀಕರಿಸಿದರು ಮತ್ತು 1947 ರಲ್ಲಿ ಭಾರತ ಸ್ವಾತಂತ್ರ್ಯ ಗಳಿಸಿತು.

2022 ರ ಹೊತ್ತಿಗೆ ನಾವು ನವ ಭಾರತವನ್ನು ನಿರ್ಮಿಸುತ್ತೇವೆ ಎಂದು ಪ್ರತಿಪಾದಿಸುತ್ತೇವೆ.

- **ಭಾರತವನ್ನು** ಸ್ವಚ್ಛ ಭಾರತವನ್ನಾಗಿ ಮಾಡುತ್ತೇವೆಂದು ನಾವೆಲ್ಲರೂ ಒಟ್ಟಿಗೆ ಪ್ರಮಾಣ ಮಾಡುತ್ತೇವೆ.
- **ಭಾರತವನ್ನು** ಬಡತನ ಮುಕ್ತ ಭಾರತವನ್ನಾಗಿ ಮಾಡುತ್ತೇವೆಂದು ನಾವೆಲ್ಲರೂ ಒಟ್ಟಿಗೆ ಪ್ರಮಾಣ ಮಾಡುತ್ತೇವೆ.
- **ಭಾರತವನ್ನು** ಭ್ರಷ್ಟಾಚಾರ ಮುಕ್ತ ಭಾರತವನ್ನಾಗಿ ಮಾಡುತ್ತೇವೆಂದು ನಾವೆಲ್ಲರೂ ಒಟ್ಟಿಗೆ ಪ್ರಮಾಣ ಮಾಡುತ್ತೇವೆ.
- **ಭಾರತವನ್ನು** ಭಯೋತ್ಪಾದನೆ ಮುಕ್ತ ಭಾರತವನ್ನಾಗಿ ಮಾಡುತ್ತೇವೆಂದು ನಾವೆಲ್ಲರೂ ಒಟ್ಟಿಗೆ ಪ್ರಮಾಣ ಮಾಡುತ್ತೇವೆ.
- **ಭಾರತವನ್ನು** ಮತಾಂಧತೆ ಮುಕ್ತ ಭಾರತವನ್ನಾಗಿ ಮಾಡುತ್ತೇವೆಂದು ನಾವೆಲ್ಲರೂ ಒಟ್ಟಿಗೆ ಪ್ರಮಾಣ ಮಾಡುತ್ತೇವೆ.
- **ಭಾರತವನ್ನು** ಜಾತಿವಾದ ಮುಕ್ತ ಭಾರತವನ್ನಾಗಿ ಮಾಡುತ್ತೇವೆಂದು ನಾವೆಲ್ಲರೂ ಒಟ್ಟಿಗೆ ಪ್ರಮಾಣ ಮಾಡೋಣ.

ನವ ಭಾರತಕ್ಕಾಗಿ ನಾವು ಎಲ್ಲರೂ ಒಟ್ಟಾಗಿ ಈ ಪ್ರತಿಜ್ಞಾವಿಧಿಯನ್ನು ಸಾಕಾರಗೊಳಿಸಲು ಮನಃಪೂರ್ವಕವಾಗಿ ಶ್ರಮಿಸೋಣ.